# ಆರಾಧನೆ ನಾಯಕ ನೀನೇ

ಆರಾಧನೆ ನಾಯಕ ನೀನೇ ಆರಾಧನೆಗೆ ಯೋಗ್ಯನು ನೀನೆ
ಆರಾಧನೆಗೆ ಯಜಮಾನ ನೀನೆ ಆರಾಧನೆ ಅರಸನು ನೀನೆ
ಜೀವಿಸುವ ಕಾಲವೆಲ್ಲಾ ನಿನ್ನನೆ ಆರಾಧಿಸುವೆ

ಪರಿಶುದ್ದ ದೇವರು ನೀನೆ ಪರಿಶುದ್ದ ಆರಾಧನೆ
ಪರಲೋಕದ ತಂದೆ ನೀನೆ ಮಹಿಮೆಯ ಆರಾಧನೆ
ಮೊಣ ಕಾಲುರಿ ಕೈಗಳನ್ನೆತ್ತಿ ನಿನ್ನನೆ ಆರಾಧಿಸುವೆ

ಭಕ್ತರ ಆರಾಧನೆಗೆ ಯೋಗ್ಯನೆ ಆರಾಧನೆ ಆರಾಧನೆ
ದೂತರು ಆರಾಧಿಸುವ ಕರ್ತನೆ ಆರಾಧನೆ ಆರಾಧನೆ
ಧ್ವಜ ಪ್ರಾಯನೆ ನೀನು ನನ್ನ ಇನಿಯನೆ ನಿನ್ನನೆ ಆರಾಧಿಸವೆ

ನನಗಾಗಿ ಬಲಿಯಾದ ಯೇಸುವೆ ದಿನವೆಲ್ಲ ಆರಾಧಿಸುವೆ
ಬೇಗನೆ ಬರಲಿರುವ ಯೇಸುವೆ ಹರುಷದಿ ಆರಾದಿಸುವೆ
ಅಭಿಷೇಕಾತ್ಮನೆ ಆತ್ಮ ಪ್ರಿಯನೆ ನಿನ್ನನೆ ಆರಾಧಿಸುವೆ